ಅತ್ತಿತ್ತ ಕತ್ತು ತಿರುಗಿಸುತ್ತ ನಿಂತಿದ್ದರು. ಅವರ ಮುಂದೆಯೇ ಮೆಚ್ಚುಗೆಯಿಂದ ಹುಬ್ಬೇರಿಸಿದ್ದ ಆಸ್ಪತ್ರೆಯ ಡಾಕ್ಟರ್ ಕಾರಿನಲ್ಲಿ ಹೋದರು. ಅವರ ಕಡೆ ಕಣ್ಣೂ ಹಾಯಿಸಲಿಲ್ಲ. ಕೂಗಿದರೂ ಕೇಳಿಸದಷ್ಟು ದೂರದಲ್ಲಿ ಆಗಾಗ ಓಡುವ ಆಟೊಗಳು.

ಗಂಟೆ ಎಷ್ಟಾಯಿತೆಂದು ಸರಸೂ ಗಮನಕ್ಕೆ ಬಂದಿರಲಿಲ್ಲ. ತಮ್ಮ ನೆರಳೇ ತಮಗೆ ಕಾಣದ ಸಮಯ ಎಂದು ನೋಡಿದಾಗ ತಿಳಿಯಿತು. ಮುಖಕ್ಕೆ ಚರ್ಮಗಳನ್ನು ಸೀಳಿ ಒಳಕ್ಕಿಳಿಯುತ್ತಿದ್ದ ತಾಪ. ಅತ್ತಿತ್ತ ನೋಡುತ್ತಿರುವುದೇ ಕಷ್ಟವಾಗಿ ಒಂದೆರಡು ಸಲ ಒಬ್ಬರನ್ನೊಬ್ಬರು ನೋಡಿದರಷ್ಟೆ.

'ಕ್ಯಾಪ್ ಹಾಕ್ಕೊಂಡು ಬರಬೇಕಿತ್ತು' ಎಂದಳು. ಅವನು ಒಂದು ಸಲ ತಲೆ ಮುಟ್ಟಿಕೊಂಡು 'ಪರವಾಗಿಲ್ಲ' ಎಂದ.

ಬಿಸಿಗಾಳಿ ಬೀಸುತ್ತಿತ್ತು. ಅಷ್ಟು ದೂರದಲ್ಲಿ ಕಾಣುತ್ತಿದ್ದ ಅಂಗಡಿ ಸಾಲುಗಳಲ್ಲಿಯೂ ಇಬ್ಬರು ಬಿಸಿಲಿನ ಶಾಖಕ್ಕೆ ಬೆದರಿ ಅರ್ಧ ಶಟರ್ ಎಳೆದಿದ್ದರು. ಉಳಿದ ಇನ್ನೆರಡರಲ್ಲಿ ಒಂದು ಕಡೆ ಭಾರಿ ಗಾತ್ರದ ಬಲೂನುಗಳು ನೇತಾಡುತ್ತಿದ್ದರೆ ಇನ್ನೊಂದು ಕಡೆ ಚಪ್ಪಲಿಗಳು ಅತ್ತಿತ್ತ ಅಲ್ಲಾಡುತ್ತಿದ್ದವು.

'ಏನಾದ್ರೂ ತಿಂದ್ಕೊಂಡು ಬಂದೆಯೋ ಇಲ್ವೋ?'

ಅವನು ಅವಳ ಕಡೆ ಸುಮ್ಮನೆ ನೋಡಿದನಷ್ಟೆ.

ಇನ್ನಷ್ಟು ಸಮಯ ಕಳೆದ ಮೇಲೆ ಆಟೊ ಕಂಡು ಹತ್ತಿರಕ್ಕೆ ಬಂದಾಗ ನಿಲ್ಲಿಸಿ 'ಪೊಲೀಸ್ ಸ್ಟೇಷನ್' ಎಂದಳು ಸರಸೂ. ಆಟೊದವನು ನೆಟ್ಟ ದೃಷ್ಟಿಯಿಂದ ನೋಡಿದ. ಅವನು ಅನುಮಾನ ಹುಟ್ಟಿಸುವಂತೆ ನಡೆದುಕೊಂಡರೂ ಕೊನೆಗೆ ಭಯದಿಂದಲೋ ಅಥವಾ ಮತ್ತೇನೋ ಒಪ್ಪಿದ.

ಅಷ್ಟು ದೂರದ ತನಕ ಮತ್ತೆ ಇಬ್ಬರಿಂದ ಮಾತಿಲ್ಲ. ಚಲಿಸುವ ಚಿತ್ರಗಳಂತೆ ಹಾದು ಹೋಗುತ್ತಿದ್ದದ್ದು ಏನೆಂದು ಅವಳ ಅರಿವಿಗೆ ಬರಲಿಲ್ಲ. ಸ್ಪಷ್ಟವಿರದ ಶಬ್ದ, ನಿಶ್ಯಬ್ದಗಳ ಮಿಶ್ರಣ ಜೊತೆಗೆ. ಕುಳಿತಲ್ಲಿಯೇ ಪ್ರಖರ ಶಾಖದ ಗಾಳಿ ಕೆನ್ನೆಗೆ, ಕಿವಿಗೆ ರಾಚುತ್ತಿತ್ತು. ದೂಳು ಕೂಡ ಅದರೊಂದಿಗೆ ಸೇರಿ ಕಣ್ಣು ಬಿಡದಂತಾಯಿತು. ಒಮ್ಮೆ ಕಣ್ಣೊರೆಸಿಕೊಂಡರೂ ಪೂರ್ತಿ ಸರಿ ಹೋಗಲಿಲ್ಲ. ನಾಗೇಂದ್ರನ ಕಡೆ ಕತ್ತು ತಿರುಗಿಸಿದರೆ ಅವನು ಒಂದು ಕೈಯಲ್ಲಿ ಪೊಟ್ಟಣ ಹಿಡಿದು ಮತ್ತೊಂದರಿಂದ ಹಣೆಯ ಮೇಲೆ ಕೈಯಾಡಿಸಿದ್ದು ಕಂಡಿತು. ಇಂಥ ಉಬ್ಬರದ, ಒತ್ತಡದ ಪರಿಸ್ಥಿತಿಗೆ ಅಕಾರಣವಾಗಿ ಭಾಗಿಯಾಗಬೇಕಾದ ಅವನ ಬಗ್ಗೆ ಮರುಕ ಉಂಟಾಯಿತು. ಅವಳು ಸುಮ್ಮನೆ ಒಂದು ಕೈಯನ್ನು ಸೂಟ್‌ಕೇಸಿನ ಮೇಲಿಟ್ಟು ಮತ್ತೊಂದನ್ನು ನಾಗೇಂದ್ರನ ಮಂಡಿಯ ಮೇಲೆ ಮೃದುವಾಗಿ ಇಟ್ಟಳಷ್ಟೆ.

ಸರಸೂ ಆ ರಸ್ತೆಯಲ್ಲಿ ಹೋಗುವಾಗ ಪೊಲೀಸ್ ಸ್ಟೇಷನ್‌ನ ಬೋರ್ಡ್ ನೋಡಿದ್ದಳಾದರೂ ಅದರ ಸುತ್ತಲಿನ ಯಾವ ವಿವರಣೆಗಳನ್ನೂ ಗಮನಿಸಿರಲಿಲ್ಲ. ಈಗ ಆಟೊದಿಂದ ಇಳಿದಾಗಷ್ಟೇ ಅವು ಕಣ್ಣೊಳಗೆ ತೂರಿದವು. ಕಾಂಪೌಂಡಿನುದ್ದಕ್ಕೂ ಚಿತ್ರವಿಚಿತ್ರ ರೀತಿಗಳಲ್ಲಿ ಅರ್ಧ ಬಾಗಿ, ಅರ್ಧ ಮೇಲೆತ್ತಿ, ಒಂದು ಚಕ್ರವಿದ್ದರೆ ಮತ್ತೊಂದಿಲ್ಲದ, ಹೀಗೆ ವಿವಿಧ ಭಂಗಿಯಲ್ಲಿ ಸವೆದ, ಮಾಸಿದ, ಚಿಂದಿಯಾದ ಹಲವು ಬಣ್ಣದ ಟೆಂಪೋಗಳು, ಸ್ಕೆಲಿಟನ್‌ನಂತೆ ಕಾಣುತ್ತಿದ್ದ ಆಟೊಗಳು, ಅವುಗಳಲ್ಲಿ ಪ್ರಮುಖ. ಎಲ್ಲಕ್ಕೂ ಅರೆಬರೆ ಜೀವ. ಮತ್ತೆ ಉಸಿರಾಡಿ ಸರಿಹೋಗುವುದು ಸಾಧ್ಯವಿಲ್ಲದ ಸಂಗತಿ. ಅವುಗಳ ಕಡೆ ಅರೆಕ್ಷಣವಷ್ಟೇ ಕಣ್ಣು ಹಾಯಿಸಿ